ನಿಮ್ಮೊಡನೆ

# ಅಮೆರಿಕದ 'ಆತಂಕ'

ಈಗ ಹಾಗಲ್ಲ; ಜಗತ್ತಿನ ಎಲ್ಲೇ ಮಳೆ ಜೋರಾಗಿ ಬಂದರೂ ಭಾರತದಲ್ಲಿ ನಾವು ನೆಗಡಿಯಾಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಆರ್ಥಿಕತೆಯ ವಿಷಯದಲ್ಲಂತೂ ಇದು ಪೂರಾ ನಿಜ.

ಅಂತರರಾಷ್ಟ್ರೀಯ ಕ್ರೆಡಿಟ್ ರೇಟಿಂಗ್ ಸಂಸ್ಥೆ 'ಸ್ಟಾಂಡರ್ಡ್ ಆ್ಯಂಡ್ ಪೂರ್' ಅಮೆರಿಕದ ಸಾಲ ವಾಪಸಾತಿ ಸಾಮರ್ಥ್ಯದ ರೇಟಿಂಗ್‌ಅನ್ನು 'ಎಎಎ'ಯಿಂದ 'ಎಎ ಪ್ಲಸ್'ಗೆ ಕೆಳಕ್ಕಿಳಿಸಿರುವುದು ಜಾಗತಿಕ ಆರ್ಥಿಕ ಕ್ಷೇತ್ರದಲ್ಲಿ ಹೊಸ ತಲ್ಲಣಗಳನ್ನು ಉಂಟುಮಾಡಿದೆ. ದೀರ್ಘಕಾಲೀನ ಸಾಲದ ಮರುಪಾವತಿ ಹೊಣೆಗಳನ್ನು ನಿರ್ವಹಿಸುವಲ್ಲಿ ಅಮೆರಿಕದ ಸಾಮರ್ಥ್ಯ ಕುಂದಿದೆ ಎನ್ನುವುದು ಹೊಸ ರೇಟಿಂಗ್‌ನ ಅರ್ಥ. ಅಮೆರಿಕದ ಇತಿಹಾಸದಲ್ಲೇ ಮೊದಲ ಬಾರಿಗೆ ಕ್ರೆಡಿಟ್ ರೇಟಿಂಗ್ 'ಎಎಎ'ಯಿಂದ ಕೆಳಕ್ಕೆ ಇಳಿದಿದೆ ಎನ್ನುವುದೂ ಮಹತ್ವದ ಸಂಗತಿ. ಬಹುತೇಕ ಎಲ್ಲ ದೇಶಗಳ ಮಾರುಕಟ್ಟೆಗಳ ಮೇಲೂ ಅಮೆರಿಕ ಪ್ರಭಾವ ಹೊಂದಿರುವುದರಿಂದ ಈ ಸುದ್ದಿ ಎಲ್ಲೆಡೆ ಆತಂಕದ ಅಲೆಗಳನ್ನು ಎಬ್ಬಿಸಿದೆ. 2008ರಲ್ಲಿ ಹೀಗೆಯೇ ಅಮೆರಿಕದ ವಿಮಾ ಕಂಪೆನಿಗಳು ಮತ್ತು ಹಲವು ಬ್ಯಾಂಕುಗಳು ದಿವಾಳಿಯ ಅಂಚಿಗೆ ತಲುಪಿದಾಗ ಜಾಗತಿಕ ಆರ್ಥಿಕ ಕ್ಷೇತ್ರದಲ್ಲಿ ತಲ್ಲಣ ಉಂಟಾಗಿತ್ತು. ಈಗ ಮತ್ತೊಮ್ಮೆ ಅಂತಹದ್ದೇ ಗಂಭೀರ ಆರ್ಥಿಕ ಕುಸಿತ ಉಂಟಾಗಬಹುದೆ ಎನ್ನುವುದು ಸ್ಪಷ್ಟವಾಗಿಲ್ಲ. 'ನಮ್ಮ ರಾಜಕೀಯ ವ್ಯವಸ್ಥೆಯ ನಿಧಾನಗತಿಯ ಕ್ರಮಗಳ ಹಿನ್ನೆಲೆಯಲ್ಲಿ ಕ್ರೆಡಿಟ್ ರೇಟಿಂಗ್ ಸಂಸ್ಥೆ ಈ ರೀತಿ ಮಾಡಿದೆ. ನಮ್ಮ ಆರ್ಥಿಕತೆ ಸದೃಢವಾಗಿದೆ. ಸಾಲ ತರುವ ಹಾಗೂ ತೀರಿಸುವ ನಮ್ಮ ಸಾಮರ್ಥ್ಯದ ಬಗ್ಗೆ ಯಾರಿಗೂ ಅನುಮಾನ ಬೇಡ' ಎಂದು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಸ್ಪಷ್ಟನೆ ನೀಡಿದ್ದಾರೆ.

ಹಾಗೆಂದು ಈ ಸುದ್ದಿಯನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಜಾಗತಿಕ ಕ್ರೆಡಿಟ್ ರೇಟಿಂಗ್ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪೆನಿಗಳಿಂದ ರೇಟಿಂಗ್‌ಗೆ ಪ್ರತಿಯಾಗಿ ಸಂಭಾವನೆ ಪಡೆಯುತ್ತವೆ ಎನ್ನುವುದು ನಿಜ. ಅಂದ ಮಾತ್ರಕ್ಕೆ ಅವುಗಳ ರೇಟಿಂಗ್ ಕ್ರಮಗಳಲ್ಲಿ ಸ್ವಹಿತಾಸಕ್ತಿಗಳಿವೆ ಎಂದು ಕುರುಡಾಗಿ ಅಂದಾಜಿಸಲಾಗದು. ರೇಟಿಂಗ್ ವಿಧಾನಕ್ಕೂ ಅದರದ್ದೇ ಆದ ಮಾನದಂಡಗಳಿವೆ. ಅದರಲ್ಲೂ ಅಮೆರಿಕದಂತಹ ಪ್ರಬಲ ರಾಷ್ಟ್ರದ ಸಾಲಧಾರಣಾ ಸಾಮರ್ಥ್ಯದ ಬಗ್ಗೆ ಯಾವುದೇ ಕ್ರೆಡಿಟ್ ರೇಟಿಂಗ್ ಸಂಸ್ಥೆ ತಪ್ಪು ಲೆಕ್ಕಾಚಾರ ಹಾಕುತ್ತದೆಂದು ಭಾವಿಸಲಾಗದು. ಭಾರತ ಈ ನಿಟ್ಟಿನಲ್ಲಿ ತನ್ನದೇ ಆದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಈಗಾಗಲೆ 'ಸೆಬಿ' ಅಧಿಕಾರಿಗಳು ನವದೆಹಲಿಯಲ್ಲಿ ಸಭೆ ಸೇರಿ ಈ ಬಗ್ಗೆ ಚರ್ಚಿಸಿದ್ದಾರೆ. ಪರಿಸ್ಥಿತಿಯನ್ನು ನಿಕಟವಾಗಿ ಅವಲೋಕಿಸಲೂ ತೀರ್ಮಾನಿಸಿದ್ದಾರೆ. 'ಅಮೆರಿಕದ ಈ ಕ್ರೆಡಿಟ್ ರೇಟಿಂಗ್ ಹಿನ್ನಡೆಯಿಂದ ನಾವು ತೀರಾ ಆತಂಕ ಪಡಬೇಕಿಲ್ಲ. ನಮ್ಮ ಆರ್ಥಿಕತೆ ಸದೃಢವಾಗಿದೆ. ಆದರೆ ಭಾರತದ ದೇಶೀಯ ಐಟಿ ಉದ್ಯಮಕ್ಕೆ ತೊಂದರೆಯಾಗುವುದು ನಿಜ' ಎಂದು ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಹೇಳಿದ್ದಾರೆ.

ಹಿಂದೆಲ್ಲಾ 'ಚೀನಾದಲ್ಲಿ ಮಳೆ ಬಂದರೆ ಭಾರತದ ಕಮ್ಯುನಿಸ್ಟರು ಕೊಡೆ ಹಿಡಿಯುತ್ತಾರೆ' ಎನ್ನುವ ಮಾತಿತ್ತು. ಈಗ ಹಾಗಲ್ಲ; ಜಗತ್ತಿನ ಎಲ್ಲೇ ಮಳೆ ಜೋರಾಗಿ ಬಂದರೂ ಭಾರತದಲ್ಲಿ ನಾವು ನೆಗಡಿಯಾಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಆರ್ಥಿಕತೆಯ ವಿಷಯದಲ್ಲಂತೂ ಇದು ಪೂರಾ ನಿಜ. ಅಮೆರಿಕದ ಕಂಪೆನಿಗಳು ಆರ್ಥಿಕವಾಗಿ ಸದೃಢವಾಗಿದ್ದರೆ ನಮ್ಮ 'ಔಟ್‌ಸೋರ್ಸಿಂಗ್' ಐ.ಟಿ ಕಂಪೆನಿಗಳ ಲಕ್ಷಾಂತರ ನೌಕರರು ಕ್ಷೇಮವಾಗಿರುತ್ತಾರೆ. ಜಪಾನಿನಲ್ಲಿ ಸುನಾಮಿ ಬಂದರೆ ನಮ್ಮ ಆಟೊಮೊಬೈಲ್ ಮಾರುಕಟ್ಟೆಯಲ್ಲಿ ಏರುಪೇರಾಗುತ್ತದೆ. ಪಾಕಿಸ್ತಾನದಲ್ಲಿ ಸಕ್ಕರೆ ಜಾಸ್ತಿ ಉತ್ಪಾದನೆಯಾದರೆ ನಮ್ಮಲ್ಲಿ ಸಕ್ಕರೆ ದರ ಕೆಳಗಿಳಿದು ರೈತರು ಏಟು ತಿನ್ನುತ್ತಾರೆ. ಚೀನಾದ ಕಂಪೆನಿಗಳು ಉತ್ಪನ್ನಗಳ ದರಗಳನ್ನು ಕಡಿಮೆ ಮಾಡಿದಷ್ಟೂ ನಮ್ಮ ಎಲೆಕ್ಟ್ರಾನಿಕ್ ಕಂಪೆನಿಗಳು ಬಾಗಿಲು ಮುಚ್ಚುವ ಸಂಭವ ಹೆಚ್ಚಾಗುತ್ತದೆ. ಜಗತ್ತೇ ಒಂದು ಹಳ್ಳಿಯಾಗಿರುವ ಈ ದಿನಗಳಲ್ಲಿ ಇದು ಸಹಜ ವಿದ್ಯಮಾನವೂ ಹೌದು.

ಲಕ್ಷಾಂತರ ಭಾರತೀಯರು ಕೊಲ್ಲಿ ದೇಶಗಳಲ್ಲಿ ಉದ್ಯೋಗದಲ್ಲಿದ್ದು, ಅಲ್ಲಿಂದ ಭಾರತಕ್ಕೆ ಬರುವ ಹಣದ ಹರಿವು ಇಲ್ಲಿನ ಆರ್ಥಿಕತೆಯನ್ನು ಮೇಲಕ್ಕೆತ್ತಿದೆ. ಅಮೆರಿಕದಲ್ಲಿ ಆರ್ಥಿಕ ಹಿಂಜರಿಕೆ ಉಂಟಾದರೆ ದೊಡ್ಡ ಹೊಡೆತ ತಿನ್ನುವುದು ಕೊಲ್ಲಿ ದೇಶಗಳು. ಅಲ್ಲಿನ ಬಹುತೇಕ ಕಂಪೆನಿಗಳ ಹೂಡಿಕೆ ಅಮೆರಿಕದಲ್ಲೇ ಇದೆ. ಹಾಗಿರುವಾಗ ಅಮೆರಿಕದ ಆರ್ಥಿಕ ಹಿನ್ನಡೆ ಪರೋಕ್ಷವಾಗಿ ಭಾರತದಲ್ಲೂ ಹಣಕಾಸಿನ ಏರಿಳಿತಗಳನ್ನು ಉಂಟು ಮಾಡುತ್ತದೆ. ನಮ್ಮ ಮಾರುಕಟ್ಟೆಯ ಸ್ಪರ್ಧಾ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ, ಅಮೆರಿಕ ಮಾತ್ರವಲ್ಲ, ಯೂರೋಪ್ ಹಾಗೂ ಏಷ್ಯಾದ ಇತರ ದೇಶಗಳಲ್ಲೂ ಮಾರುಕಟ್ಟೆಯ ಪ್ರಾಬಲ್ಯ ಹೊಂದುವುದು ಈಗ ಆಗಬೇಕಿರುವ ಕೆಲಸ. ಆಗ 'ಅಮೆರಿಕದ ಆತಂಕ'ವನ್ನು ಇತರೆಡೆ ಸರಿದೂಗಿಸಲು ಸಾಧ್ಯವಾಗಬಹುದು.

■ ಬಿ.ಎಂ.ಹನೀಫ್

